# VOLUME-XIX : RESEARCH ARTICALS PRESENTED IN THE 30th SESSION OF THE KARNATAKA HISTORY CONGRESS HELD AT KARNATAK UNIVERSITY, DHARWAD


| | | |
|---|---|---|
| EDITED BY | : | DR. R.M. SHADAKSHARIAH<br>DR. IRANNA PATTAR |
| PUBLISHED BY | : | THE KARNATAKA HISTORY CONGRESS ® |
| YEAR OF PUBLICATION | : | 2022 |
| PAGES | : | vi+690 |
| COPIES | : | 1000 |
| ISBN | : | 978-81-954061-9-7 |
| COPYRIGHT | : | THE KARNATAKA HISTORY CONGRESS |
| PRICE | : | 500/- |
| PUBLISHED BY | : | Dr. IRANNA PATTAR<br>Retd. Professor and General Secretary<br>The Karnataka History Congress<br>Department of Studies in History<br>Bangalore University, Bangalore-560 056 |
| PRINTED AT | : | Akshara Mantapa, Bangalore. |



L.V.D. COLLEGE
RAICHUR

PRINCIPAL
L.V.D. College, RAICHUR-03.



THE PUBLICATION OF THIS VOLUME HAS BEEN FINANCIALLY SUPPORTED BY THE KARNATAKA STATE ARCHIVES DEPARTMENT



THE RESPONSIBILITY FOR THE FACTS STATED OR OPINIONS EXPRESSED IS ENTIRELY OF THE AUTHORS AND NOT OF THE KARNATAKA STATE ARCHIVES DEPARTMENT OR THE KARNATAKA HISTORY CONGRESS



Scanned with OKEN Scanner

Neglected Vishnant temple of Gabbur

TKHC – *Studies in Karnataka History and Culture*, Vol. 19, 2022

# ಗಬ್ಬೂರಿನ ನಿರ್ಲಕ್ಷಿತ ವೈಷ್ಣವ ದೇವಾಲಯ

**ಚನ್ನಾರೆಡ್ಡಿ ಎಸ್**

ಪಿಹೆಚ್.ಡಿ. ಸಂಶೋಧನಾರ್ಥಿ, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನ ಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ-583105

**1) ಪೀಠಿಕೆ:**

ಎಡದೊರೆಯ ನಾಡು ಎಂದೇ ಪ್ರಖ್ಯಾತವಾದ ರಾಯಚೂರು ಜಿಲ್ಲೆ ಐತಿಹಾಸಿಕವಾಗಿ ತನ್ನದೇ ಆದ ಅಸ್ತಿತ್ವವನ್ನು ಪಡೆದು ಪ್ರಸಿದ್ಧವಾಗಿದೆ. ಪುರಾಣ ಪ್ರಸಿದ್ಧವೂ, ಇತಿಹಾಸ ಪ್ರಸಿದ್ದವೂ ಆಗಿರುವ ದೇವದುರ್ಗ ತಾಲೂಕಿನ ಗಬ್ಬೂರ ಗ್ರಾಮವು ದೇವಾಲಯಗಳ ಪಟ್ಟಣ ಎಂದು ಖ್ಯಾತಿಯಾಗಿದ್ದು, ಪಟ್ಟಣದಲ್ಲಿ **30** ದೇವಾಲಯಗಳು **28** ಶಿಲಾಶಾಸನಗಳು ದೊರೆತಿದ್ದು ಚಾರಿತ್ರಿಕ ಮಹತ್ವವನ್ನು ಹೊಂದಿದೆ. ಗಬ್ಬೂರು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಒಂದು ಅಗ್ರಹಾರ. ಇಲ್ಲಿ ಕಲ್ಯಾಣ ಚಾಲುಕ್ಯರ ಆಳ್ವಿಕೆ ಕಾಲದಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಲಾಗಿದೆ. ಗಬ್ಬೂರಿನ ಕೆಲವು ಪ್ರಮುಖ ದೇವಾಲಯಗಳಾದ ಹನುಮಾನ್, ಈಶ್ವರ, ವೆಂಕಟೇಶ್ವರ, ಮಹಾನಂದೀಶ್ವರ, ಮೇಲುಶಂಕರ, ಏಳುಬಾವಿ ಬಸವಣ್ಣ ಮತ್ತು ಬೂದಿಬಸವೇಶ್ವರ ದೇವಾಲಯಗಳಿವೆ. ಹಾಗೆಯೇ ಇಲ್ಲಿ ಚಂಡಿದರ್ವಾಜ ಎಂಬ ಹಳೆಯ ದ್ವಾರವು ಅನೇಕ ದೇವಾಲಯಗಳು ಶಾಸನಗಳು ಕಂಡು ಬಂದಿವೆ.

ಇಲ್ಲಿನ ಶಾಸನಗಳು ಮತ್ತು ದೇವಾಲಯದ ವಾಸ್ತುಶಿಲ್ಪಗಳು ಅಂದಿನ ಗತವೈಭವವನ್ನು ನೆನಪಿಗೆ ತರುತ್ತವೆ. ವಿಗ್ರಹಗಳು, ಕಲ್ಯಾಣಿ, ಬಾವಿ, ವೀರಗಲ್ಲು, ಮಾಸ್ತಿಕಲ್ಲುಗಳು ಈ ಗ್ರಾಮದ ಸಾಂಸ್ಕೃತಿಕ ಮಹತ್ವವನ್ನು ಎತ್ತಿತೋರಿಸುತ್ತವೆ. ಭೂಗರ್ಭದ ಮಣ್ಣಲ್ಲಿ ಹೂತುಹೋಗಿದ್ದ ದೇವಾಲಯವೊಂದನ್ನು ಇತ್ತೀಚಿಗೆ ಊರಿನ ತರುಣರು ಬಯಲಿಗೆ ತಂದಿದ್ದಾರೆ. ಅದರ ಕಲೆ ಮತ್ತು ವಾಸ್ತು ಶಿಲ್ಪದ ವೈಶಿಷ್ಟ್ಯವನ್ನು ಹೇಳುವುದು ಈ ಲೇಖನದ ಉದ್ದೇಶವಾಗಿದೆ.

**2) ಚಾರಿತ್ರಿಕ ಹಿನ್ನಲೆ:**

ಈ ಗ್ರಾಮದ ಪ್ರಾಚೀನತೆ ಹಾಗೂ ಐತಿಹಾಸಿಕ ಹಿನ್ನಲೆಯನ್ನು ಗಮನಿಸುವುದಾದರೆ ಕಲ್ಯಾಣ ಚಾಲುಕ್ಯರು ಕಲಚೂರಿಗಳು, ಸೇವುಣರು, ವಿಜಯನಗರ ಸಾಮ್ರಾಜ್ಯ ಮುಂತಾದವರ ಆಳ್ವಿಕೆಗೆ ಒಳಪಟ್ಟ ಗ್ರಾಮವಾಗಿತ್ತು. ಇಲ್ಲಿ ಅನೇಕ ಶಾಸನಗಳು, ದೇವಾಲಯುಗಳು, ವಿಗ್ರಹಗಳು, ಕಲ್ಯಾಣಿ, ಬಾವಿ, ವೀರಗಲ್ಲು, ಮಾಸ್ತಿಕಲ್ಲು ಮುಂತಾದ ಅನೇಕ ವಾಸ್ತುಶಿಲ್ಪಗಳು ಕಂಡು ಬರುತ್ತವೆ. ತನ್ನದೇ ಆದ ಐತಿಹಾಸಿಕ ಚಾರಿತ್ರಿಕ ಹಿನ್ನಲೆಯನ್ನು ಹೊಂದಿದೆ.

**3) ಸ್ಥಳನಾಮ:**

ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಒಂದು ಗ್ರಾಮ, ಐತಿಹಾಸಿಕಸ್ಥಳ, ಹೋಬಳಿ ಕೇಂದ್ರವಾದ ಇದು ದೇವದುರ್ಗಕ್ಕೆ ಆಗ್ನೇಯ ದಿಕ್ಕಿನ ರಾಯಚೂರು ಮಾರ್ಗದಲ್ಲಿ ಬರುತ್ತದೆ. ಈ ಗ್ರಾಮಕ್ಕೆ ಗೊಬ್ಬೂರು ಎಂಬ ಹೆಸರಿದೆ. 12–13ನೇ ಶತಮಾನಗಳಲ್ಲಿ ಗೋಪುರ ಗ್ರಾಮ ಎಂದು ಹೆಸರಾಗಿದ್ದ ಅಗ್ರಹಾರ ಮತ್ತು ವಿದ್ಯಾಕ್ಷೇತ್ರವಾಗಿತ್ತು. ಅನೇಕ ಗೋಪುರಗಳು ಇರುವುದರಿಂದ ಈ ಗ್ರಾಮಕ್ಕೆ ಗೋಪುರಪುರ ಎಂದು ಕರೆಯುತ್ತಿದ್ದರು. ಕಲ್ಯಾಣ ಚಾಲುಕ್ಯರ 6ನೇ ವಿಕ್ರಮಾದಿತ್ಯ ಕಾಲಕ್ಕೆ ಸೇರಿದ ಸು. 1109 ರ ಶಾಸನದ ಪ್ರಕಾರ ಬ್ರಹ್ಮಜಿನಾಲಯ ಎಂಬ ಜೈನ ಮಂದಿರವೊಂದು ಇಲ್ಲಿದ್ದಿತ್ತು. ಅಂದು ಈ ಊರಿಗೆ ಹಿರಿಯ ಗೊಬ್ಬೂರು ಎಂಬ ಹೆಸರಿತ್ತೆಂದು ತಿಳಿದು ಬರುತ್ತದೆ.

**4) ಭೌಗೋಳಿಕ ಹಿನ್ನಲೆ:**

ಗಬ್ಬೂರು ಗ್ರಾಮವು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಆಗ್ನೇಯ ಭಾಗಕ್ಕೆ ಈ ಊರು 27 ಕಿ. ಮೀ ದೂರದಲ್ಲಿದ್ದು, ಕೃಷ್ಣಾ ನದಿಯಿಂದ 16 ಕಿ. ಮೀ ದೂರದಲ್ಲಿದ್ದು, ಈ ಊರಿನಲ್ಲಿ ಪಶ್ಚಿಮಕ್ಕೆ ಸೂಗೂರೇಶ್ವರ ಬೆಟ್ಟ ಮತ್ತು ಉತ್ತರಕ್ಕೆ ರತ್ನಗಿರಿ ಬೆಟ್ಟ ಎಂಬ ಎರಡು ಬೆಟ್ಟಗಳಿವೆ. ಇಲ್ಲಿನ ಸೂಗೂರೇಶ್ವರ ಬೆಟ್ಟದಲ್ಲಿ ಪ್ರಾಗೈತಿಹಾಸಿಕ ಕೆಲವು ಕುರುಹುಗಳು ಕಂಡು ಬಂದಿವೆ. ಗಬ್ಬೂರಿನ ಸುತ್ತಲು 3 ಕೆರೆಗಳು ಇದ್ದು, ಅನೇಕ ಬಾವಿಗಳು ಕೂಡ ಇಲ್ಲಿ ಕಂಡು ಬರುತ್ತವೆ. ಇದು ಅಕ್ಷಾಂಶ 16. 30 ಉತ್ತರ ಮತ್ತು ರೇಖಾಂಶ 77. 15 ಇದೆ. ಗಬ್ಬೂರಿನ ಭೂಮಿಯು ಕೆಂಪು, ಕಪ್ಪು, ಮರಳು ಮತ್ತು ಚೌಳು ಮಣ್ಣಿನಿಂದ ಕೂಡಿದೆ. ಇಲ್ಲಿನ ಪ್ರಮುಖ ಬೆಳೆಗಳಾದ ಹತ್ತಿ, ಭತ್ತ, ಗೋಧಿ, ಜೋಳ, ಸಜ್ಜೆ, ಮೆಣಸಿನಕಾಯಿ ಮುಂತಾದವುಗಳನ್ನು ಬೆಳೆಯಲಾಗುತ್ತದೆ.

L.V.D. COLLEGE RAICHUR

PRINCIPAL
L.V.D. College, RAICHUR-03.



Scanned with OKEN Scanner

**5) ಕಲೆ ಮತ್ತು ವಾಸ್ತುಶಿಲ್ಪ:**

12ನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಧಿಸಿದ ವೈಷ್ಣವ ದೇವಾಲಯವು ಸರಳವಾದ ಕಲೆ ಮತ್ತು ವಾಸ್ತುಶಿಲ್ಪಗಳಿಂದ ನಿರ್ಮಾಣವಾಗಿದೆ. ಇಲ್ಲಿ ಕೇವಲ ಬಾಗಿಲವಾಡ ಮತ್ತು ಲಲ್ಲಾಟದಲ್ಲಿ ಮಾತ್ರ ಶಿಲ್ಪಗಳನ್ನು ಕೆತ್ತಲಾಗಿದೆ. ನವರಂಗದ ಮಧ್ಯದಲ್ಲಿ ಇರುವ ನಾಲ್ಕು ಕಂಬಗಳನ್ನು ಸ್ವಲ್ಪಭಾಗ ಮಾತ್ರ ಚಿತ್ರಪಟ್ಟಿಕೆಗಳನ್ನು ಕೆತ್ತಿದ್ದಾರೆ. ಇವರು ಈ ದೇವಾಲಯಕ್ಕೆ ಬೆಣಚುಕಲ್ಲನ್ನು ಉಪಯೋಗಿಸಿ ನಿರ್ಮಿಸಿದ್ದಾರೆ. ಈ ದೇವಾಲಯಕ್ಕೆ ಗರ್ಭಗೃಹದ ಮೇಲೆ ಯಾವುದೇ ಗೋಪುರ ಕಂಡು ಬರುವುದಿಲ್ಲ.

**ವೈಷ್ಣವ ದೇವಾಲಯ**

| | |
|---|---|
| ಸ್ಥಳ – ಊರ ಒಳಗೆ | ಶೈಲಿ – ಕಲ್ಯಾಣ ಚಾಲುಕ್ಯರು |
| ಊರು – ಗಬ್ಬೂರು | ಅಭಿಮುಖ – ಉತ್ತರಾಭಿಮುಖ |
| ಕಾಲ – 12ನೇ ಶತಮಾನ | ಸ್ಥಿತಿ – ಮಧ್ಯಮ |

**6) ಗರ್ಭಗೃಹ:**

ದಕ್ಷಿಣ ಭಾಗಕ್ಕೆ ಇರುವ ಗರ್ಭಗೃಹವು ಉತ್ತರಾಭಿಮುಖವಾಗಿ ಬಾಗಿಲನ್ನು ಹೊಂದಿದ್ದು, ಇದು ಕಪ್ಪುಶಿಲೆಯಿಂದ ನಿರ್ಮಿಸಿದ ಅಲಂಕೃತವಾದ ಮತ್ತು ಆಕರ್ಷಕವಾದ ಕೆತ್ತನೆಗಳಿಂದ ಕೂಡಿದೆ. ಬಾಗಿಲವಾಡದ ತೋರಣ ಪಟ್ಟಿಕೆಗಳು ಅನೇಕ ಶಿಲ್ಪಗಳಿಂದ ಕೂಡಿದ್ದು ಅವುಗಳು ಹೂವಿನ ಚಿತ್ರ, ಆನೆಗಳ ಶಿಲ್ಪ, ಅಲಂಕೃತವಾದ ಕಂಬ ಮತ್ತು ವಿವಿಧ ಶಿಲ್ಪಗಳ ಕೆತ್ತನೆಯಿಂದ ಕೂಡಿದೆ. ಇದರ ಕೆಳಬಾಗದ ಬಲಬಾಗದಲ್ಲಿ 7 ಶಿಲ್ಪಗಳಿದ್ದು ಎರಡು ಪುರುಷ 2 ಸ್ತ್ರೀಯರು ಮತ್ತು 3 ಸೇವಕಿಯರ ಶಿಲ್ಪಗಳನ್ನು ಕೆತ್ತಲಾಗಿದೆ. ಇಲ್ಲಿ ಶಿಲ್ಪಗಳ ಕೈಯಲ್ಲಿ ಕಬ್ಬು ಮತ್ತು ಕಾಮದ ಬಾಣವನ್ನು ಹಿಡಿದ ರತಿ ಮನ್ಮಥರ ಶಿಲ್ಪಗಳನ್ನು ಕೆತ್ತಿದ್ದಾರೆ ಎಡಭಾಗದ ಕೆಳಗೆ ವೈಷ್ಣವ ದ್ವಾರಪಾಲಕನ ಶಿಲ್ಪವಿದ್ದು ಕೈಯಲ್ಲಿ ಗದೆ, ಚಕ್ರ, ಶಂಕ ಮತ್ತು ಕಮಲವನ್ನು ಹಿಡಿದ ಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪವು ಅನೇಕ ವಿವಿಧ ಬಗೆಯ ಆಭರಣಗಳನ್ನು ಧರಿಸಿದ್ದು ಕಂಡು ಬರುತ್ತದೆ. ಜೊತೆಗೆ ಎರಡು ಚಿಕ್ಕದಾದ ಸ್ತ್ರೀ ಶಿಲ್ಪಗಳನ್ನು ಕೆತ್ತಲಾಗಿದೆ. ಬಾಗಿಲವಾಡದ ಮೇಲೆ ಲಲ್ಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವನ್ನು ಕೆತ್ತಿದ್ದು ಅದರ ಮೇಲೆ ಗೋಪುರ ಶಿಲ್ಪಗಳು ಇವೆ. ಗರ್ಭ ಗೃಹದ ಒಳಗಡೆ ಯಾವುದೆ ವಿಗ್ರಹ ಕಂಡುಬರುವುದಿಲ್ಲ ಹಾಗು ಇದರ ಮೇಲ್ಛಾವಣಿ ಸಂಪೂರ್ಣ ಕುಸಿದು ಹೋಗಿ ಪಾಳುಬಿದ್ದಿದೆ. ದ್ವಾರಪಾಲಕರ ಶಿಲ್ಪಗಳ ಲಕ್ಷಣಗಳನ್ನು ನೋಡಿದರೆ ಇದನ್ನು ವೈಷ್ಣವ ದೇವಾಲಯ ಎಂದು ಹೇಳಬಹುದು.

ನವರಂಗ ಮಂಟಪದ ಪಶ್ಚಿಮ ಭಾಗಕ್ಕಿರುವ ಗರ್ಭಗೃಹವನ್ನು ಪ್ರವೇಶಿಸುವುದಕ್ಕಿಂತ ಮುಂಚೆ ವಿಶಾಲವಾದ ಸುಖನಾಸಿಯನ್ನು ಹೊಂದಿದ್ದು, ಮೇಲ್ಛಾವಣೆಯಲ್ಲಿ ಭುವನೇಶ್ವರಿ ಶಿಲ್ಪವಿದೆ. ಗರ್ಭಗೃಹದ ಪ್ರವೇಶ ದ್ವಾರದ ಮೇಲೆ ಲಲ್ಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪಹೊಂದಿದ್ದು, ಅದರ ಮೇಲೆ ಗೋಪುರಗಳನ್ನು ಕೆತ್ತಲಾಗಿದೆ. ಬಾಗಿಲವಾಡದ ತೋರಣಗಳು ಅಲಂಕೃತವಾದ ಕೆತ್ತನೆಗಳಿಂದ ಕೂಡಿದ್ದು ಅದರ ಕೆಳಭಾಗದ 2 ಕಡೆಗಳಲ್ಲಿ ಕುಂಬಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಒಳಗಡೆ ಯಾವುದೇ ವಿಗ್ರಹ ಕಂಡು ಬರುವುದಿಲ್ಲ. ಆದರೆ ವಿಗ್ರಹದ ಪೀಠ ಮಾತ್ರ ಕಾಣಿಸುತ್ತದೆ.

**7) ಅಂತರಾಳ:**

ನವರಂಗ ಮಂಟಪದ ದಕ್ಷಿಣ ಭಾಗಕ್ಕಿರುವ ಅಂತರಾಳವು 2 ಕಂಬಗಳನ್ನು ಹೊಂದಿದ್ದು, ನವರಂಗ ಮಂಟಪದ ಕಂಬಗಳಿಗಿಂತ ಗಾತ್ರದಲ್ಲಿ ಚಿಕ್ಕದಾಗಿದೆ. ಇವುಗಳ ಮಧ್ಯಭಾಗವು ಅಷ್ಟಕೋನಾಕೃತಿ ಮತ್ತು ವೃತ್ತಾಕಾರದ ಪಟ್ಟಿಕೆಗಳನ್ನು ಹೊಂದಿದ್ದು ಇದರ ಮೇಲ್ಛಾವಣೆಯಲ್ಲಿ ಭುವನೇಶ್ವರಿ ಶಿಲ್ಪವನ್ನು ಒಳಗೊಂಡಿದೆ.


**8) ನವರಂಗ ಮಂಟಪ:**

ಮುಖಮಂಟಪದಿಂದ ಒಳಗಡೆ ಪ್ರವೇಶಿಸುತ್ತಿದ್ದಂತೆ ವಿಶಾಲವಾದ ನವರಂಗ ಕಾಣಿಸುತ್ತದೆ. ನಾಲ್ಕು ಕಂಬಗಳಿಂದ ಕೂಡಿದ ಈ ಮಂಟಪವನ್ನು ಬಹಳ ಸುಂದರವಾಗಿ ಮತ್ತು ಸರಳವಾಗಿ ನಿರ್ಮಿಸಿದ್ದಾರೆ. ಕಂಬಗಳ ಪೀಠಗಳು 40 ಸೆಂ. ಮೀ ಉದ್ದ ಮತ್ತು 40 ಸೆಂ. ಮೀ ಅಗಲವಾದಲ್ಲಿ ಚಚ್ಚೌಕಾರದಲ್ಲಿವೆ. ಅದರ ಮೇಲ್ಭಾಗವು 40ಸೆಂ. ಮೀ ಉದ್ದ 40 ಸೆಂ ಮೀ ಅಗಲ ಚಚ್ಚೌಕಾರದಲ್ಲಿ ಕೆತ್ತಲಾಗಿದೆ. ಅದರ ಮೇಲ್ಭಾಗ ಗೋಲಾಕಾರದಲ್ಲಿ ಕೆತ್ತಿದ್ದು ಅಲ್ಲಲ್ಲಿ ಅಲಂಕೃತ ಕೆತ್ತನೆಯಿಂದ ಕೂಡಿದೆ. ಕಂಬಗಳ ಮೇಲೆ ವೃತ್ತಾಕಾರದ ಮುಚ್ಚಳವಿದ್ದು ಅದರ ಮೇಲೆ ಚಚ್ಚೌಕಾರದ ಫಲಕವನ್ನು ಹೊಂದಿದ್ದು, ಅದರ ಮೇಲೆ ಸಾದಾ ಬೋಧಿಗೆಗಳನ್ನು ರಚಿಸಲಾಗಿದೆ.



Scanned with OKEN Scanner


ನವರಂಗದ ಬಿತ್ತಿಯು ಒಟ್ಟು 14 ಕಂಬಗಳನ್ನು ಹೊಂದಿದ್ದು, ಚಚ್ಚೌಕಾರದಲ್ಲಿವೆ. ಒಂದು ಕಂಬದಿಂದ ಮತ್ತೊಂದು ಕಂಬಗಳ ಅಂತರ 5.5 ಅಡಿ ಇದೆ. ನವರಂಗ ಮಂಟಪವು ಒಟ್ಟು 9 ಅಂಕಣಗಳನ್ನು ಹೊಂದಿದ್ದು ಮೇಲ್ಛಾವಣೆಯಲ್ಲಿ 3 ಭುವನೇಶ್ವರಿ ಶಿಲ್ಪಗಳನ್ನು ಒಳಗೊಂಡಿದೆ. ನವರಂಗ ಮಂಟಪದ ಗೋಡೆಯ ಸುತ್ತಲೂ ಪೀಠಗಳನ್ನು ನಿರ್ಮಿಸಲಾಗಿದ್ದು ಅದರ ಕೆಳಭಾಗದಲ್ಲಿ ಕಮಲವನ್ನು ಬಿಡಿಸಲಾಗಿದೆ.



**ನವರಂಗ ಮಂಟಪ**

**9) ಮುಖಮಂಟಪ:**

ದೇವಾಲಯದ ಪ್ರವೇಶ ದ್ವಾರವು ಉತ್ತರಾಭಿಮುಖವಾಗಿದೆ. ಪ್ರವೇಶ ದ್ವಾರವು ನಾಲ್ಕು ಕಂಬಗಳನ್ನು ಹೊಂದಿದ್ದು, ಹಿಂದಿನ ಸಾಲಿನಲ್ಲಿ ಎರಡು ಕಂಬಗಳು ಪ್ರವೇಶ ದ್ವಾರದ ಗೋಡೆಯಲ್ಲಿ ಸೇರಿಕೊಂಡಿವೆ. ಇವುಗಳ ಅಂತರ ಬಹಳ ಕಡಿಮೆ ಇದೆ. ಅಂದರೆ ಕೇವಲ 20 ಇಂಚು ಮಾತ್ರ ಇದೆ. ಪ್ರವೇಶದ್ವಾರದ ಬಾಗಿಲು ತೋರಣ ಪಟ್ಟಿಗಳಿಂದ ಅಲಂಕೃತವಾದ ಕೆತ್ತನೆಯಿಂದ ಕೂಡಿದ್ದು ಅದರ ಕೆಳಭಾಗದಲ್ಲಿ ಎರಡು ಕಡೆ ದ್ವಾರಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ಬಲಗಡೆಯ ದ್ವಾರಪಾಲಕರ ಶಿಲ್ಪದ ಬಲಗೈಯಲ್ಲಿ ಚಕ್ರ, ಎಡಗೈಯಲ್ಲಿ ಗದೆಯನ್ನು ಹಿಡಿದಿವೆ. ಎಡಭಾಗದ ದ್ವಾರಪಾಲಕನ ಬಲಗೈಯಲ್ಲಿ ಗದೆ ಹಾಗೂ ಎಡಗೈಯಲ್ಲಿ ಕಮಲವನ್ನು ಹಿಡಿದಿದ್ದಾನೆ. ಮುಖಮಂಟಪದ ಬಾಗಿಲ ಮೇಲೆ ಗಜಲಕ್ಷ್ಮಿಯ ಶಿಲ್ಪವಿದೆ, ಅದರ ಮೇಲೆ ಗೋಪುರಗಳನ್ನು ಕೆತ್ತಲಾಗಿದೆ.




ಪ್ರವೇಶದ್ವಾರ

PRINCIPAL
L.V.D. College, RAICHUR.

**10) ತಲಾವಿನ್ಯಾಸ:**

ದೇವಾಲಯವು ತ್ರಿಕೂಟ ಮಾದರಿಯಲ್ಲಿದ್ದು, ಸದ್ಯಕ್ಕೆ ದ್ವಿಕೂಟ ಮಾದರಿ ಮಾತ್ರ ಕಾಣಿಸುತ್ತದೆ. ಏಕೆಂದರೆ ಪೂರ್ವ ಬಾಗಕ್ಕೆ ಇರುವ ಮತ್ತೊಂದು ಗರ್ಭಗೃಹ ಮುಚ್ಚಿರುವುದರಿಂದ ಅದನ್ನು ಗುರುತಿಸುವುದು ಕಷ್ಟವಾಗಿದೆ. ಹಾಗಾಗಿ 2 ಗರ್ಭಗೃಹ 2 ಸುಖನಾಸಿ, ನವರಂಗ, ಮುಖಮಂಟಪ ಒಳಗೊಂಡ ಸರಳ ಕೆತ್ತನೆಯಿಂದ ಕೂಡಿದ ಬೆಣಚು ಕಲ್ಲಿನಿಂದ ಇದನ್ನು ನಿರ್ಮಿಸಲಾಗಿದೆ. ಇದು 12 ನೇ ಶತಮಾನಕ್ಕೆ ಸೇರಿದ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವಾಗಿದೆ.

**11) ಹೊರಭಾಗದ ವಿನ್ಯಾಸ:**

ಈ ದೇವಾಲಯದ ಹೊರಭಾಗವು ಉತ್ತಮ ಸ್ಥಿತಿಯಲ್ಲಿದ್ದು, ಅನೇಕ ದೊಡ್ಡ ದೊಡ್ಡ ಗೋಡೆ–ಕಂಬಗಳನ್ನು ಒಳಗೊಂಡಿದ್ದು, ದೇವಾಲಯದ ಸುತ್ತಲು ಕಂಡು ಬರುತ್ತದೆ. ಗರ್ಭಗೃಹದ ಹೊರಭಾಗದಲ್ಲಿ ದೊಡ್ಡ ದೊಡ್ಡ ಬಿಳಿ ಕಲ್ಲುಗಳು ಕಂಡು ಬರುತ್ತವೆ. ದೇವಾಲಯದ ಮೇಲೆ ಯಾವುದೇ ಗೋಪುರ ಕಂಡು ಬರುವುದಿಲ್ಲ.

**12) ಅಧಿಷ್ಠಾನ :**

ಇದರ ಭಿತ್ತಿಯು ಸಮಪಾತಾಳಯಲ್ಲಿದೆ. ಭಿತ್ತಿಯ ಎಲ್ಲಾಭಾಗಗಳಲ್ಲಿ ಭಾರವನ್ನು ಹೊರಲು ಮಧ್ಯದಲ್ಲಿ ಉಬ್ಬು ಕಂಬಗಳನ್ನು ನಿರ್ಮಿಸಲಾಗಿದೆ. ಆದರೆ ಇದರ ಜಗಲಿಯನ್ನು ಗುರುತಿಸುವುದಕ್ಕೆ ಸಾಧ್ಯವಾಗಿಲ್ಲ ಏಕೆಂದರೆ ಅದು ಮಣ್ಣಲ್ಲಿ ಹೂತುಹೋಗಿದೆ. ಈ ದೇವಾಲಯದ ಹೊರಗೋಡೆಯಲ್ಲಿ ಚಚ್ಚೌಕಾರದ ದೊಡ್ಡ ಕಂಬಗಳನ್ನು ನಿರ್ಮಿಸಿದ್ದಾರೆ.

**13) ಉಪಸಂಹಾರ**

ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಗಬ್ಬೂರು ಗ್ರಾಮವು ಪುರಾತನ ಸಂಸ್ಕೃತಿ ಮತ್ತು ಐತಿಹಾಸಿಕ ಮಹತ್ವವನ್ನು ಪಡೆದಿದ್ದು, ಇಲ್ಲಿ ಅನೇಕ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟು ಸರ್ವಧರ್ಮಗಳ ಸಮನ್ವಯತೆಯನ್ನು ಸಾಧಿಸಿದೆ. ಐತಿಹಾಸಿಕ ಗತವೈಭವವನ್ನು ಮೆಲುಕ ಹಾಕುತ ಸುಸ್ಥಿತಿಯಲ್ಲಿರುವ ಭವ್ಯ ದೇವಾಲಯಗಳು ಅದ್ಭುತ ಶಿಲ್ಪಗಳಿಂದ ದೇಗುಲುಗಳು, ಹೆಸರಿಲ್ಲದ ಪಾಲು ದೇಗುಲಗಳು ಇಲ್ಲಿ ಅಸಂಖ್ಯವಾಗಿವೆ. ಅದರಲ್ಲಿ ಇದು ಕೂಡ ಒಂದಾಗಿದೆ. ಆಯಾ ಕಾಲದಲ್ಲಿ ಆಳ್ವಿಕೆ ಮಾಡಿದ ಅರಸರು ದಾನ ದತ್ತಿಗಳನ್ನು ಕೊಡುವುದರ ಮೂಲಕ ಗುಡಿ–ಗುಂಡಾರಗಳನ್ನು ನಿರ್ಮಿಸಿ ಗಬ್ಬೂರಿನ ಸಾಂಸ್ಕೃತಿಕ ವೈಭವವನ್ನು ಉತ್ತುಂಗ ಶಿಖರಕ್ಕೆ ಕೊಂಡೊಯ್ದಿದ್ದಾರೆ.

ಈ ಲೇಖನದ ಉದ್ದೇಶ ನಿರ್ಲಕ್ಷಕ್ಕೆ ಒಳಪಟ್ಟ ಈ ದೇವಾಲಯದ ಪ್ರಾಚೀನ ಗತವೈಭವವನ್ನು ತಿಳಿಸುವುದು ಮುಖ್ಯವಾಗಿದ್ದು, ಈ ದೇವಾಲಯವು ಇನ್ನೂ ಕೆಲವು ಭಾಗಗಳನ್ನು ಹೊರತೆಗೆದರೆ ಮತ್ತಷ್ಟು ಮಾಹಿತಿ ಪಡೆಯಲು ಸಾಧ್ಯ. ಪುರಾತತ್ವ ಇಲಾಖೆಯವರು ಈ ದೇವಾಲಯದ ಜವಾಬ್ದಾರಿಯನ್ನು ವಹಿಸಿಕೊಂಡು ಇದರ ಸುತ್ತಲೂ ಹೂಳನ್ನು ಹೊರತೆಗೆದು ಜೀರ್ಣೋದ್ಧಾರ ಮಾಡಬೇಕಾಗಿದೆ. ಪಾಳು ಬಿದ್ದಿರುವ ಸ್ಮಾರಕಗಳನ್ನು ಪುನಾರಚಿಸಿ ನಶಿಸುತ್ತಿರುವ ಅವುಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಅವುಗಳ ಮಹತ್ವವನ್ನು ತೋರಿಸುವ ಜವಾಬ್ದಾರಿ ನಮ್ಮೆಲ್ಲರದಾಗಿದೆ.

**ಕೊನೆ ಟಿಪ್ಪಣಿಗಳು**

1. ಮಹೇಶ – ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು, 2003, ಎಂ. ಫಿಲ್ ನಿಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಪು. ಸಂ. 2, 3
2. ಅದೇ ಪು. ಸಂ. 6, 7, 8
3. ಅದೇ ಪು. ಸಂ. 12, 13
4. ಅದೇ ಪು. ಸಂ. 28, 29

**ಪರಾಮರ್ಶನ ಗ್ರಂಥಗಳು**

1. ಮಹೇಶ – ಗಬ್ಬೂರು ಶಾಸನಗಳು ಮತ್ತು ದೇವಾಲಯಗಳು, 2003, ಎಂ. ಫಿಲ್ ನಿಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಪು. ಸಂ. 2, 3.
2. ಸಿ. ಎಸ್. ಪಾಟೀಲ್ – ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ದೇವಾಲಯಗಳು, 1992, Directorate of Archaeology and Museum, Mysore, Indian.



Scanned with OKEN Scanner